## ಅಧ್ಯಾಯ-೬

# ಬ್ಯಾಂಕಿಂಗ್, ಸಹಕಾರ ಮತ್ತು ವಾಣಿಜ್ಯ

ರಾಜ್ಯದಲ್ಲಿ ಮೊದಲ ಬ್ಯಾಂಕಿಂಗ್ ಉದ್ಯಮ ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಮೈಸೂರು ಸಂಸ್ಥಾನದಲ್ಲಾಯಿತು. ಆರಂಭದಲ್ಲಿ ಒಂದು ಜಾತಿಯ, ಕೋಮಿನ/ವೃತ್ತಿಯ ಅಥವಾ ಗುಂಪಿನ ಪ್ರತಿನಿಧಿಗಳು ತಮ್ಮ ಅನುಕೂಲತೆಗಾಗಿ, ಉಳಿತಾಯ ಸಾಧನೆಗಾಗಿ, ಅಥವಾ ತಮ್ಮ ತಮ್ಮ ಕೈಗಾರಿಕೆ ಅಥವಾ ವ್ಯಾಪಾರ ಉದ್ಯಮಗಳ ಪೋಷಣೆಗಾಗಿ ಸ್ಥಾಪಿಸಿಕೊಂಡ ದ್ರವ್ಯಸಂಸ್ಥೆಗಳು ಬ್ಯಾಂಕಿಂಗ್ ಉದ್ಯಮದ ಪ್ರಥಮ ಹೆಜ್ಜೆಗಳು. ಅವುಗಳ ಪ್ರಥಮೋದ್ದೇಶ ಬೇರೆಯಾಗಿದ್ದರೂ ಆನಂತರದ ಬೆಳವಣಿಗೆಯಲ್ಲಿ ಅವುಗಳ ಮೂಲಭೂತ ಉದ್ದೇಶಗಳು ಹಿಂದೆ ಬಿದ್ದು, ಸಾಮಾಜಿಕ ಪ್ರಜ್ಞೆ ಮೂಡಿಬಂದು, ಅದಕ್ಕೆ ತಕ್ಕಂತೆ ಅವುಗಳ ಬೆಳವಣಿಗೆಯಾದವು. ಈ ದಿಶೆಯಲ್ಲಿ ಕೈಗಾರಿಕಾಭಿವೃದ್ಧಿಗೆ ದುಡಿಯುತ್ತಿರುವ ಕೈಗಾರಿಕಾ ಬ್ಯಾಂಕುಗಳು ಮತ್ತು ಇತ್ತೀಚೆಗೆ ಸ್ಥಾಪಿಸಲ್ಪಟ್ಟ ಪ್ರಾದೇಶಿಕ ಬ್ಯಾಂಕುಗಳು ಮುಖ್ಯವಾದವು.

ಆಧುನಿಕ ಬ್ಯಾಂಕು ಸಂಸ್ಥೆಗಳ ಜೊತೆಗೆ, ಪ್ರಾಚೀನ ಕಾಲದಿಂದಲೂ ಹಣದ ವ್ಯವಹಾರ ನಡೆಸುತ್ತ ಬಂದಿರುವ ಅಪ್ಪಟ ಸ್ಥಳೀಯವೆನ್ನಬಹುದಾದ ಬ್ಯಾಂಕು ವ್ಯವಸ್ಥೆಯೂ ಜಾರಿಯಲ್ಲಿದ್ದು, ದೇಶದ ಉದ್ದಗಲಕ್ಕೂ ಹರಡಿಕೊಂಡಿರುವ ಈ ದೇಶಿಯ ಬ್ಯಾಂಕಿಂಗ್ ವ್ಯವಸ್ಥೆ ಇಂದಿಗೂ ವ್ಯಾಪಕವಾದ ಹಣದ ವಹಿವಾಟುಗಳನ್ನು ನಿರ್ವಹಿಸುತ್ತಿದೆ. ಸಾಹುಕಾರರು, ಸೇಠರು, ಮಹಾಜನರು, ಮುಲ್ತಾನಿಗಳು, ಬನಿಯರು, ಚೆಟ್ಟಿಯಾರರು ಮೊದಲಾದ ಹೆಸರುಗಳಿಂದ ದೇಶದ ವಿವಿಧ ಭಾಗಗಳಲ್ಲಿ ವಂಶ ಪಾರಂಪರ್ಯವಾಗಿ ಬಂದ ಹಣಕಾಸು ವ್ಯವಹಾರವನ್ನು ನಿರ್ವಹಿಸುತ್ತಿದ್ದಾರೆ. ಇದನ್ನು ದೇಶೀಯ ಬ್ಯಾಂಕಿಂಗ್ ವ್ಯವಸ್ಥೆ ಎನ್ನಲಾಗುತ್ತಿದೆ.

ಹಿಂದಿನ ಮೈಸೂರು ಸಂಸ್ಥಾನದಲ್ಲಿ ೧೮೭೪ರಲ್ಲಿ ಆರಂಭಗೊಂಡ ರಾಜಧಾನಿ ಬ್ಯಾಂಕ್, ಮೈಸೂರು ನ್ಯಾಷನಲ್ ಬ್ಯಾಂಕ್ (೧೮೯೧) ಹಾಗೂ ಮೈಸೂರು ಟೌನ್ ಬ್ಯಾಂಕುಗಳು ೧೯೧೩ರವರೆಗೆ ಕಾರ್ಯನಿರ್ವಹಿಸಿದ್ದವು. ಮುಂದೆ ೧೮೯೪ರಲ್ಲಿ ಮೈಸೂರು ಸರ್ಕಾರ ಕೃಷಿ ಬ್ಯಾಂಕ್‌ಗಳನ್ನು ಆರಂಭಿಸುವ ಮೂಲಕ ಕೃಷಿಕರ ನೆರವಿಗೆ ಮುಂದಾಯಿತು. ಆದರೆ ಈ ಬ್ಯಾಂಕ್‌ಗಳನ್ನು ದೊಡ್ಡ ಹಿಡುವಳಿದಾರರು ದುರ್ಬಳಕೆ ಮಾಡಿಕೊಂಡ

ನಂತರ ಅವು ೧೯೧೭ರ ವೇಳೆಗೆ ಮುಚ್ಚಲ್ಪಟ್ಟವು. ಮೈಸೂರು ಸರ್ವಜನ ವರ್ಧಿನಿ ಕಂಪೆನಿ ಲಿ. ಎಂಬ ಜಾಯಿನ್ಟ್ ಸ್ಟಾಕ್ ಕಂಪೆನಿಯು ೧೮೯೫ರಲ್ಲಿ ಮೈಸೂರಿನಲ್ಲಿ ಕಾರ್ಯಾರಂಭ ಮಾಡಿತಾದರೂ ಬಹಳ ಕಾಲ ನಡೆಯಲಿಲ್ಲ. ಏತನ್ಮಧ್ಯೆ ಬೃಹತ್ ಬ್ಯಾಂಕಿಂಗ್ ಉದ್ಯಮದ ನಾಂದಿ ಮೈಸೂರು ಬ್ಯಾಂಕಿನ ಸ್ಥಾಪನೆಯೊಡನೆ ಆಯಿತು. ಈಗಿನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮೈಸೂರು ಬ್ಯಾಂಕು ನಿಯಮಿತ ಎಂಬ ಹೆಸರಿನಿಂದ ಬೆಂಗಳೂರಿನಲ್ಲಿ ೧೯೧೩ರಲ್ಲಿ ಸ್ಥಾಪಿತವಾಯಿತು. ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಇದರ ಸ್ಥಾಪಕರು. ಅನೇಕ ವರ್ಷಗಳ ಕಾಲ ಇಡೀ ಮೈಸೂರು ರಾಜ್ಯಕ್ಕೆ ಅದು ಒಂದು ಜನಪ್ರಿಯ ಏಕಸ್ವಾಮ್ಯ ಬ್ಯಾಂಕಿಂಗ್ ಸಂಸ್ಥೆಯಾಗಿತ್ತು. ಇದರ ಮೊದಲ ಶಾಖೆಯನ್ನು ಮೈಸೂರು ನಗರದಲ್ಲಿ ೧೯೧೪ರಲ್ಲಿ ಆರಂಭಿಸಲಾಯಿತು. ೧೯೩೦ರಿಂದ ಈಚಿನ ವರ್ಷಗಳಲ್ಲಿ ಕೆಲವಾರು ಸಣ್ಣಪುಟ್ಟ ಬ್ಯಾಂಕುಗಳು ಪ್ರಾರಂಭಿಸಲ್ಪಟ್ಟರೂ ಈ ಉದ್ಯಮದ ಹೆಚ್ಚು ಬೆಳವಣಿಗೆಯನ್ನು ೧೯೩೬ ರಿಂದ ಕಾಣಬಹುದು. ದಕ್ಷಿಣ ಕನ್ನಡ ಮೂಲದ ಕಾರ್ಪೋರೇಷನ್ ಬ್ಯಾಂಕಿನ ಶಾಖಾ ಬ್ಯಾಂಕ್ ಮೈಸೂರು ನಗರದಲ್ಲಿ ೧೯೩೬ರಲ್ಲಿ ಕಾರ್ಯಾರಂಭ ಮಾಡಿತು. ಕ್ರಮೇಣ ನಗರದಲ್ಲಿ ಸಿಂಡಿಕೇಟ್ ಬ್ಯಾಂಕ್, ಮತ್ತು ವೈಶ್ಯ ಬ್ಯಾಂಕ್ (೧೯೪೫), ಕೆನರಾ ಬ್ಯಾಂಕ್ (೧೯೪೬), ಐ.ಓ.ಸಿ. ಹಾಗೂ ಪಂಜಾಬ್ ನ್ಯಾಷನಲ್ ಬ್ಯಾಂಕ್ (೧೯೪೭)ಗಳ ಶಾಖಾ ಕಛೇರಿಗಳು ಆರಂಭಗೊಂಡವು. ಮೈಸೂರು ಬ್ಯಾಂಕಿನ ಜೊತೆಗೆ ಈ ಬ್ಯಾಂಕುಗಳೂ ಸೇರಿ ಉಳಿತಾಯ ಠೇವಣಿಗಳನ್ನು ಆಕರ್ಷಿಸುವುದರಲ್ಲಿ, ಕೈಗಾರಿಕೆ, ವಾಣಿಜ್ಯ ಮತ್ತು ಸಾರಿಗೆಗೆ ಧನಸಹಾಯವನ್ನು ಮಾಡುವುದರಲ್ಲಿ ಪ್ರಪ್ರಥಮವಾದುವು.

ಸ್ವಾತಂತ್ರ್ಯಪೂರ್ವದಲ್ಲಿ ಈ ಬ್ಯಾಂಕುಗಳು ದೇಶದ ಅಭಿವೃದ್ಧಿಗೆ ನೆರವಾದುದರ ಬಗ್ಗೆ ನಿಖರವಾಗಿ ತಿಳಿದು ಬರುವುದಿಲ್ಲ. ಆದರೆ ಸ್ವಾತಂತ್ರ್ಯಾನಂತರದಲ್ಲಿ ದೇಶದ ಅಭಿವೃದ್ಧಿಗೆ ಬ್ಯಾಂಕಿಂಗ್ ಉದ್ಯಮ ಅನೇಕ ರೀತಿಯಲ್ಲಿ ಸಹಾಯ ಮಾಡಿದೆ. ಅದರಲ್ಲೂ ೧೯೫೬ರ ನಂತರ ಈ ಉದ್ಯಮಕ್ಕೆ ಒಂದು ವಿಶೇಷ ರೀತಿಯ ಚಾಲನೆ ಹಾಗೂ ಚೇತನ ಬಂದಿತು. ಮೈಸೂರು ಬ್ಯಾಂಕ್, ಕೆನರಾ ಬ್ಯಾಂಕ್ ಮತ್ತು ಸಿಂಡಿಕೇಟ್ ಬ್ಯಾಂಕ್ ಆ ಸಂದರ್ಭದಲ್ಲಿದ್ದ ಮುಖ್ಯ ಬ್ಯಾಂಕಿಂಗ್ ಸಂಸ್ಥೆಗಳು. ಈ ಮೂರು ಬ್ಯಾಂಕುಗಳೂ ಆರ್ಥಿಕ ಮತ್ತು ಕೈಗಾರಿಕಾ ಪ್ರಗತಿಯಲ್ಲಿ ವಿಶೇಷ ಆಸಕ್ತಿಯನ್ನು ತೋರಿಸಿ ಗಮನಾರ್ಹ ಪಾತ್ರವನ್ನು ವಹಿಸಿವೆ. ೧೯೬೯ರಲ್ಲಿ ಭಾರತದ ಅತಿ ದೊಡ್ಡ ಹದಿನಾಲ್ಕು ಬ್ಯಾಂಕುಗಳ ರಾಷ್ಟ್ರೀಕರಣವಾದಾಗ, ರಾಜ್ಯದ ಎರಡು ಬ್ಯಾಂಕು (ಕೆನರಾ ಮತ್ತು ಸಿಂಡಿಕೇಟ್)ಗಳೂ ಸೇರಿದ್ದು ಅದರ ಬೆನ್ನಲ್ಲೇ ಜಾರಿಗೆ ಬಂದ ಮಾರ್ಗದರ್ಶಿ ಬ್ಯಾಂಕ್ ಯೋಜನೆಯನ್ವಯ ಮೈಸೂರು ಬ್ಯಾಂಕಿಗೆ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್‌ನ ಹೊಣೆ ವಹಿಸಲಾಯಿತು. ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಕಾಯ್ದೆ (೧೯೭೬)ಯನ್ವಯ ಮೈಸೂರು ಬ್ಯಾಂಕು ವತಿಯಿಂದ ಕಾವೇರಿ ಗ್ರಾಮೀಣ ಬ್ಯಾಂಕನ್ನು ೧೯೭೬ರಲ್ಲಿ ಮೈಸೂರಿನಲ್ಲಿ ಆರಂಭಿಸಲಾಯಿತು. ಇದರ ವ್ಯಾಪ್ತಿಗೆ ಅಂದಿನ ಮೈಸೂರು ಜಿಲ್ಲೆ ಹಾಗೂ ಹಾಸನ ಜಿಲ್ಲೆಗಳು ಒಳಪಟ್ಟಿದ್ದವು. ೧೯೮೩ರ ವೇಳೆಗೆ ತಾಲೂಕಿನಲ್ಲಿ ಎಂಟು ಶಾಖಾ ಗ್ರಾಮೀಣ

ಬ್ಯಾಂಕು ಹಾಗೂ ವಿವಿಧ ವಾಣಿಜ್ಯ ಬ್ಯಾಂಕುಗಳ ೯೦ ಶಾಖೆಗಳಿದ್ದವು. ಅದೇ ೧೯೯೬ರ ಮಾರ್ಚ್ ಅಂತ್ಯಕ್ಕೆ ೧೦೪ ವಿವಿಧ ವಾಣಿಜ್ಯ ಬ್ಯಾಂಕು ಎಂಟು ಗ್ರಾಮೀಣ ಬ್ಯಾಂಕುಗಳು ತಾಲೂಕಿನಲ್ಲಿದ್ದವು.

ವಿವಿಧ ಬ್ಯಾಂಕುಗಳ ಶಾಖೆಗಳು ತಾಲೂಕಿನ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಸೇವೆ ಸಲ್ಲಿಸುತ್ತಿವೆ. ಮೈಸೂರು ಕೈಗಾರಿಕಾ ನಗರವಾಗಿರುವುದರಿಂದಲೂ ವ್ಯಾಪಾರ ಕೇಂದ್ರವಾಗಿರುವುದರಿಂದಲೂ ಬ್ಯಾಂಕಿನ ಸೇವೆ ಮಹತ್ವದ್ದಾಗಿದೆ. ೨೦೦೬ರ ಅಂತ್ಯಕ್ಕೆ ಮೈಸೂರು ತಾಲೂಕಿನಲ್ಲಿ ೧೩೭ ವಾಣಿಜ್ಯ ಶಾಖಾ ಬ್ಯಾಂಕು, ೧೩ ಗ್ರಾಮೀಣ ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತಿದ್ದು, ಇವುಗಳ ಒಟ್ಟು ಠೇವಣಿ ೩೪೯೨೬೨ ಲಕ್ಷಗಳು. ಒಟ್ಟು ಸಾಲ ೨೩೦೮೯೦ ಲಕ್ಷಗಳು. ಠೇವಣಿ ಮತ್ತು ಸಾಲದ ಅನುಪಾತ ೧೫೪ ಆಗಿತ್ತು (೨೦೦೪-೦೫). ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೧೭೩ ವಾಣಿಜ್ಯ ಶಾಖಾ ಬ್ಯಾಂಕುಗಳು, ಸಹಕಾರಿ ಬ್ಯಾಂಕು ಸೇರಿ ೧೮ ಗ್ರಾಮೀಣ ಬ್ಯಾಂಕುಗಳು ಕಾರ್ಯಪ್ರವೃತ್ತವಾಗಿದ್ದು, ಒಟ್ಟು ೭೫೫೦೧೩ ಲಕ್ಷ ರೂ.ಗಳ ಠೇವಣಿ ಸಂಗ್ರಹವಾಗಿದ್ದು ೪೭೭೮೧೧ ಲಕ್ಷ ರೂ. ಮೊತ್ತದ ಸಾಲವನ್ನು ನೀಡಲಾಗಿದ್ದು, ಠೇವಣಿ ಮತ್ತು ಸಾಲದ ಅನುಪಾತವು ಶೇ. ೬೩.೨೮ ಆಗಿತ್ತು.

**ಸಹಕಾರ :** ಸಹಕಾರ ಚಳುವಳಿ ಲೇವಾದೇವಿಯ ಕಾರ್ಯ ಚಟುವಟಿಕೆಯ ವಿರುದ್ಧ ಪ್ರಾರಂಭವಾಯಿತೆನ್ನಬಹುದು. ಈ ನಿಟ್ಟಿನಲ್ಲಿ ೧೮೯೪ರಲ್ಲಿ ಸಂಸ್ಥಾನದಲ್ಲಿ ಆರಂಭಗೊಂಡ ಹಣಕಾಸು ಸಂಸ್ಥೆ (ಕೃಷಿ ಬ್ಯಾಂಕ್‌ಗಳು) ಒಂದು ಮೈಲಿಗಲ್ಲಾಗಿತ್ತು. ೧೯೦೫ರಲ್ಲಿ ಜಾರಿಗೆ ಬಂದ ಅಂದಿನ ಮೈಸೂರು ಸಂಸ್ಥಾನದ ಮೈಸೂರು ಸಹಕಾರಿ ನಿಯಂತ್ರಣ ಕಾನೂನು, ೧೯೦೪ರ ಭಾರತದ ಸಹಕಾರ ಸಂಘಗಳ ಮಸೂದೆಗಿಂತಲೂ ಸುಧಾರಿತವಾದದ್ದಾಗಿತ್ತು. ಭಾರತ ಸರ್ಕಾರದ ಕಾನೂನು ಗ್ರಾಮೀಣ ಲೇವಾದೇವಿ ಸಂಘಗಳ ಸ್ಥಾಪನೆಗೆ ಮಾತ್ರ ಅವಕಾಶ ಮಾಡಿಕೊಟ್ಟಿದ್ದರೆ, ಮೈಸೂರಿನ ಕಾನೂನು ಸಹಕಾರಿ ಸಂಘಗಳ ಸ್ಥಾಪನೆಗೂ ಅವಕಾಶ ಮಾಡಿಕೊಟ್ಟಿತು. ಹೀಗೆ ಸಹಕಾರ ಚಳುವಳಿ ಸರ್ಕಾರದ ಮುಂದಾಳತ್ವದಲ್ಲಿ ಪ್ರಾರಂಭವಾಗಿ ಕ್ರಮೇಣ ಜನತೆಯ ಬೆಂಬಲವನ್ನೂ ಪಡೆದು ಬೆಳೆಯಿತು.

ಹಿಂದಿನ ಮೈಸೂರು ಸಂಸ್ಥಾನದಲ್ಲಿ ದೀರ್ಘಾವಧಿ ವ್ಯವಸಾಯ ಸಾಲ ಸಂಘ ಮತ್ತು ವಿವಿಧೋದ್ದೇಶ ಸಹಕಾರ ಸಂಘಗಳು ಸ್ಥಾಪನೆಯಾಗುವುದರ ಮೂಲಕ ಕರ್ನಾಟಕ ರಾಜ್ಯದ ಸಹಕಾರ ಚಳುವಳಿಗೆ ನಾಂದಿಯಾದವೆಂದು ತಿಳಿದುಬರುತ್ತದೆ. ನಗರದಲ್ಲಿ ಮೈಸೂರು ಸಹಕಾರ ಸಾಲದ ಪತ್ತಿನ ಸಂಘವು ೧೯೦೬ರಲ್ಲಿ ಸ್ಥಾಪನೆಯಾಯಿತು. ಲಕ್ಷ್ಮೀ ಸಹಾಯನಿಧಿ ಸೊಸೈಟಿಯು ೧೯೦೭ರಲ್ಲಿ ಆರಂಭವಾಯಿತು. ಇಲವಾಲ ಸೇವಾ ಸಹಕಾರಿ ಸಂಘ ೧೯೧೦ರಲ್ಲಿ ಆರಂಭಗೊಂಡಿತು. ೧೯೧೪ರಲ್ಲಿ ಮೈಸೂರು ರಾಜ್ಯ ಸಹಕಾರ ಬ್ಯಾಂಕಿನ ಸ್ಥಾಪನೆ, ೧೯೨೦ರ ದಶಕದಲ್ಲಿ ನಗರ ಗೃಹ ಸಹಕಾರ ಸಂಘ (೧೯೧೬), ಮೈಸೂರು ಗೃಹನಿರ್ಮಾಣ ಸಂಘ (೧೯೨೧), ಮಹಿಳಾ

ಕಲ್ಯಾಣಕ್ಕಾಗಿ ವಾಣಿವಿಲಾಸ ಮಹಿಳಾ ಸಹಕಾರಿ ಸಂಘ (೧೯೧೮) ಆರ್ಯಭಗಿನಿ ಸಮಾಜ (೧೯೨೧)ಗಳು ಆರಂಭಗೊಂಡವು. ಅಲ್ಲದೆ ಮಹಾರಾಜರ ಅಂಗರಕ್ಷಕ ದಳದ ಸಂಘ (೧೯೧೪), ಅರಮನೆ ಅವಸರದ ಹೋಬಳಿ ಸಂಘ (೧೯೧೪), ಅರಮನೆ ಕೇಂದ್ರೀಯ ಸಹಕಾರಿ ಸಂಘ (೧೯೨೨), ಅರಸು ಮಂಡಳಿ ಸಹಕಾರಿ ಸಂಘ (೧೯೩೫)ಗಳು ಮೈಸೂರಿನಲ್ಲಿ ಆರಂಭಗೊಂಡುವು. ೧೯೩೦ರ ದಶಕದಲ್ಲಿ ಕೇಂದ್ರೀಯ ಹಾಗೂ ಪ್ರಾಥಮಿಕ ಭೂ ಅಡಮಾನ (ಈಗ ಭೂ ಅಭಿವೃದ್ಧಿ) ಬ್ಯಾಂಕುಗಳ ಸ್ಥಾಪನೆ(೧೯೩೭)ಗೊಂಡವು. ಇವು ವಿವಿಧೊದ್ದೇಶ ಸಹಕಾರ ಸಂಘಗಳ ಸ್ಥಾಪನಾ ಯೋಜನೆಗೆ ಮೊದಲು ಅಂದರೆ ೧೯೫೧ಕ್ಕೆ ಮುಂಚಿನ ಸಹಕಾರ ಇತಿಹಾಸದ ಮುಖ್ಯ ಘಟನೆಗಳಾಗಿವೆ. ರಾಜ್ಯದ ಸಹಕಾರ ಪ್ರಗತಿಯ ಅವಶ್ಯಕತೆಯನ್ನು ಕುರಿತು ೧೯೨೦ರಲ್ಲಿ ಸಮಲ್‌ದಾಸ್ ಅಧ್ಯಕ್ಷತೆಯ ಸಹಕಾರ ಸಮಿತಿ ಹಾಗೂ ೧೯೩೫ರಲ್ಲಿ ಚಂದ್ರಶೇಖರ ಅಯ್ಯರ್ ಅವರ ಅಧ್ಯಕ್ಷತೆಯ ಸಹಕಾರಿ ಸಮಿತಿಗಳು ವಿಶೇಷ ಅಧ್ಯಯನ ನಡೆಸಿದುವು. ಆದರೆ ಸಹಕಾರರಂಗ ಬಹುಮುಖವಾಗಿ ಬೆಳೆದುದು ೧೯೫೧ರ ನಂತರದ ಆರ್ಥಿಕ ಯೋಜನೆಗಳ ಕಾಲದಲ್ಲಿ. ಈ ಸಂಬಂಧ ಹಲವಾರು ಕಾರ್ಯಯೋಜನೆಗಳನ್ನು ರೂಪಿಸಲಾಯಿತು. ಮೈಸೂರಿನಲ್ಲಿ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕನ್ನು ೧೯೫೫ರಲ್ಲಿ ಆರಂಭಿಸಲಾಯಿತು. ಆಗ ಅದರಲ್ಲಿದ್ದ ಸದಸ್ಯರ ಸಂಖ್ಯೆ ೧೪೦ ಆಗಿದ್ದು, ೧೩೨ ಸಂಘಗಳು ಹಾಗೂ ಎಂಟು ಜನರನ್ನು ಒಳಗೊಂಡಿತ್ತು. ೧೯೮೭ರ ವೇಳೆಗೆ ಇದು ೮೪೯ ಸದಸ್ಯರನ್ನು ಹೊಂದಿದ್ದು, ೧೮೭.೩೧ ಲಕ್ಷಗಳ ಷೇರು ಬಂಡವಾಳವನ್ನು ಹೊಂದಿತ್ತು. ಇದರ ೧೬ ಶಾಖೆಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ೧೯೯೭ರಲ್ಲಾದ ಜಿಲ್ಲಾ ವಿಭಜನೆಯಿಂದಾಗಿ ಈಗ ಇದನ್ನು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್ ನಿ. ಎಂದು ಕರೆಯಲಾಗುತ್ತಿದ್ದು, ಇದರ ವ್ಯಾಪ್ತಿಗೆ ಎರಡೂ ಜಿಲ್ಲೆಗಳು ಒಳಪಡುತ್ತವೆ. ೨೦೦೭ರ ಮಾರ್ಚ್ ಅಂತ್ಯಕ್ಕೆ ಈ ಬ್ಯಾಂಕು ೧೦೪೪.೫೨ ಲಕ್ಷ ರೂ. ಷೇರು ಬಂಡವಾಳವನ್ನು ಹೊಂದಿದ್ದು, ೧೧೬೫ ವಿವಿಧ ಸಹಕಾರಿ ಸಂಘಗಳು ಸದಸ್ಯತ್ವವನ್ನು ಹೊಂದಿದ್ದವು. ಈ ಬ್ಯಾಂಕು ೨೦೦೭ರ ಮಾರ್ಚ್ ಅಂತ್ಯಕ್ಕೆ ೧೨,೫೫೫.೬೨ ಲಕ್ಷ ರೂ. ಠೇವಣಿಯನ್ನು ಹೊಂದಿತ್ತು.

**ಸಹಕಾರ ಶಿಕ್ಷಣ** : ಸಹಕಾರ ಚಳವಳಿಯ ಯಶಸ್ಸು ನುರಿತ ಸಹಕಾರ ಸಿಬ್ಬಂದಿಯನ್ನೂ ಸಹಕಾರ ಪ್ರಜ್ಞೆ ಹೊಂದಿರುವ ಸದಸ್ಯ ವೃಂದವನ್ನೂ ಬಹುಮಟ್ಟಿಗೆ ಅವಲಂಬಿಸಿದೆ. ಇದನ್ನರಿತು ಕರ್ನಾಟಕ ಸರ್ಕಾರ, ಸಹಕಾರ ಶಿಕ್ಷಣ ಹಾಗೂ ತರಬೇತಿಗೆ ಸೂಕ್ತ ಏರ್ಪಾಡುಗಳನ್ನು ಮಾಡಿದೆ. ಆರ್ಥಿಕಾಭಿವೃದ್ಧಿ ಹಾಗೂ ಸಾಮಾಜಿಕ ನ್ಯಾಯ ಸಾಧನೆಗೆ ಸಹಕಾರವನ್ನು ದಕ್ಷವಾದ ಸಾಧನವಾಗುವಂತೆ ಮಾಡಲು ಸಹಕಾರ ತರಬೇತಿ, ಶಿಕ್ಷಣ ಹಾಗೂ ಪ್ರಚಾರ ಕಾರ್ಯವನ್ನು ತೀವ್ರಗೊಳಿಸಲಾಗಿದೆ. ಈ ಕಾರ್ಯಗಳ ನಿರ್ವಹಣೆ ಬಹುಮಟ್ಟಿಗೆ ಕರ್ನಾಟಕ ರಾಜ್ಯ ಸಹಕಾರ ಒಕ್ಕೂಟಕ್ಕೆ ಸೇರಿದೆ. ಈ ಒಕ್ಕೂಟದ ಆಶ್ರಯದಲ್ಲಿ ಸ್ಥಾಪಿತವಾಗಿರುವ ಸಹಕಾರ ತರಬೇತಿ ಕಾಲೇಜು ಹಾಗೂ ಸಹಕಾರ ತರಬೇತಿ ಕೇಂದ್ರಗಳಲ್ಲಿ ಸಹಕಾರ ಸಂಘಗಳ ಕಾರ್ಯಸಮಿತಿ ಸದಸ್ಯರಿಗೆ, ಆಸಕ್ತ

ಮಹಿಳೆಯರಿಗೆ ಮತ್ತು ಯುವಕರಿಗೆ ಸಹಕಾರ ಶಿಕ್ಷಣ ನೀಡಲಾಗುತ್ತಿದೆ. ಶಿಕ್ಷಣ ಶಿಬಿರಗಳ ಏರ್ಪಾಡು, ಅಧ್ಯಯನ ಮಂಡಳಿಗಳ ವ್ಯವಸ್ಥೆ, ಸಹಕಾರ ಚಲನಚಿತ್ರ ಪ್ರದರ್ಶನ, ಸಹಕಾರ ಕುರಿತ ಪುಸ್ತಕಗಳ ಪ್ರಕಟಣೆ, ಮೈಸೂರು ಸಹಕಾರ ಪತ್ರಿಕೆ ಮತ್ತು ಸಹಕಾರ ಎಂಬ ನಿಯತಕಾಲಿಕೆಗಳ ಪ್ರಕಟಣೆ ಮುಂತಾದವೂ ಜರುಗುತ್ತವೆ.

೨೦೦೪–೦೫ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಹಕಾರಿ ಮತ್ತು ಕೃಷಿ ಬ್ಯಾಂಕುಗಳ ವಹಿವಾಟು ಹೀಗಿತ್ತು : ನಗರ ಪ್ರದೇಶದ ಸಹಕಾರಿ ಬ್ಯಾಂಕು ಶಾಖೆಗಳು ೧೩, ಠೇವಣಿ ೧೭೯೭.೫೪ ಲಕ್ಷ ರೂ.ಗಳು, ಸಾಲ ನೀಡಿಕೆ ೨೨೮೭೪.೩೨ ಲಕ್ಷ ರೂ.ಗಳು. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕು ನೀಡಿರುವ ಒಟ್ಟು ಸಾಲ ೮೨.೩೪ ಲಕ್ಷ ರೂ.ಗಳು. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ಒಂಭತ್ತು ನಗರ ಪ್ರದೇಶದ ಸಹಕಾರಿ ಬ್ಯಾಂಕುಗಳಿದ್ದು, ೩೯೨೫ ಲಕ್ಷ ರೂ. ಠೇವಣಿಯನ್ನು ಹೊಂದಿದ್ದು, ೨೪೬೮.೨೯ ಲಕ್ಷ ರೂ. ಸಾಲವನ್ನು ನೀಡಲಾಗಿತ್ತು.

**ತಾಲೂಕಿನಲ್ಲಿದ್ದ ಕ್ರೆಡಿಟ್ ಸಹಕಾರ ಸಂಘಗಳು :** ವ್ಯವಸಾಯ ಸಹಕಾರ ಸಂಘಗಳು ೧೮, ಸದಸ್ಯರು ೧೩,೫೬೯; ಹಾಲು ಉತ್ಪಾದಕರ ಸಹಕಾರ ಸಂಘಗಳು ೬೧, ಸದಸ್ಯರು ೧೬,೩೧೫; ಇತರೆ ಸಹಕಾರ ಸಂಘಗಳು ೯೨, ಸದಸ್ಯರು ೭೫,೧೧೯; ಒಟ್ಟು ಸಂಖ್ಯೆ ೧೭೧, ಒಟ್ಟು ಸದಸ್ಯರು ೧,೦೫,೦೦೩, ಸಮಾಪನಗೊಂಡವು ೭೬. ೨೦೦೯ರ ಮಾರ್ಚ್ ಅಂತ್ಯಕ್ಕೆ ಇದ್ದ ವ್ಯವಸಾಯ ಸಹಕಾರ ಸಂಘಗಳು ೧೯, ಸದಸ್ಯರು ೨೨,೯೫೦; ಹಾಲು ಉತ್ಪಾದಕರ ಸಹಕಾರ ಸಂಘಗಳು ೮೩, ಸದಸ್ಯರು ೧೮,೪೫೦; ಇತರೇ ಸಹಕಾರಿ ಸಂಘಗಳು ೪೪೭, ಸದಸ್ಯರು ೧,೪೨,೨೮೦; ಇವುಗಳಲ್ಲಿ ಏಳು ಸ್ಥಗಿತಗೊಂಡಿದ್ದರೆ, ೫೪ ಸಮಾಪನಗೊಂಡಿದ್ದವಾಗಿದ್ದವು. ೨೦೦೫ರ ಮಾರ್ಚ್ ಅಂತ್ಯಕ್ಕೆ ಕೃಷಿ ಸಹಕಾರ ಸಂಘಗಳಿಂದ ಕೊಡಲ್ಪಟ್ಟ ಸಾಲ : ಅಲ್ಪಾವಧಿ ಸಾಲ ೭೪.೯೯ ಲಕ್ಷ ರೂ.ಗಳು, ಮಧ್ಯಮಾವಧಿ ಸಾಲ ೨.೮೩ ಲಕ್ಷರೂ.ಗಳು, ಒಟ್ಟು ಸಾಲ ೭೭.೮೨ ಲಕ್ಷ ರೂ.ಗಳು. ೨೦೦೯ರ ಮಾರ್ಚ್ ಅಂತ್ಯಕ್ಕೆ ೮೫.೩೨ ಲಕ್ಷ ರೂ. ಅಲ್ಪಾವಧಿ ಸಾಲ ಹಾಗೂ ೭೧.೩೦ ಲಕ್ಷ ರೂ. ದೀರ್ಘಾವಧಿ ಸಾಲವನ್ನು ಈ ಸಂಘಗಳ ಮೂಲಕ ವಿತರಿಸಲಾಗಿತ್ತು.

**ಹಣಕಾಸು ಸಂಸ್ಥೆಗಳು :** ತಾಲೂಕಿನಲ್ಲಿ ಹಣಕಾಸಿನ ವ್ಯವಹಾರಕ್ಕೆ ಖಾಸಗಿ ಲೇವಾದೇವಿಗಾರರು ಹಾಗೂ ಗಿರವಿದಾರರಲ್ಲದೇ, ಹಲವಾರು ಬ್ಯಾಂಕೇತರ ಹಣಕಾಸಿನ ಸಂಸ್ಥೆಗಳು, ಚಿಟ್‌ಫಂಡ್‌ಗಳು ಕಾರ್ಯ ನಿರ್ವಹಿಸುತ್ತಿವೆ. ನಗರ ಪ್ರದೇಶ ಹಾಗೂ ವ್ಯಾಪಾರ ಕೇಂದ್ರಗಳಲ್ಲಿ ಇಂತಹ ಸಂಸ್ಥೆಗಳು ವಾಣಿಜ್ಯ, ವ್ಯಾಪಾರ, ಉದ್ದಿಮೆ, ವಾಹನ ಖರೀದಿ ಮುಂತಾದ ವಹಿವಾಟು ನಡೆಸುತ್ತವೆ. ಅಧಿಕ ಬಡ್ಡಿಯನ್ನು ನೀಡುವ ಹಾಗೂ ನಗದು ಬಹುಮಾನಗಳನ್ನು ಕೊಡುವ ಆಮಿಷಗಳ ಮೂಲಕ ಜನರನ್ನು ಠೇವಣಿ ಇಡಲು ಆಕರ್ಷಿಸಿ ಈ ಸಂಸ್ಥೆಗಳು ತಮ್ಮ ಬಂಡವಾಳವನ್ನು ಸಂಗ್ರಹಿಸಿಕೊಳ್ಳುತ್ತವೆ.

ಇವು ನೀಡುವ ಅಧಿಕ ಬಡ್ಡಿದರದ ಸಾಲ ಪಡೆಯುವವರಲ್ಲಿ ಹೆಚ್ಚಿನವರು ಸಣ್ಣ ವ್ಯಾಪಾರಿಗಳು, ನೌಕರ ವರ್ಗದವರು ಹಾಗೂ ಮೋಟಾರು ಸಾರಿಗೆ ಉದ್ದಿಮೆಯಲ್ಲಿ ತೊಡಗಿರುವವರು. ಈ ಸಂಸ್ಥೆಗಳು ಜನಸಾಮಾನ್ಯರಲ್ಲಿ ಹಣ ಉಳಿತಾಯಕ್ಕೆ ಪ್ರೋತ್ಸಾಹ ನೀಡಿದರೂ ಕೆಲವೊಮ್ಮೆ ಮೂಲಧನವನ್ನೇ ಕಳೆದುಕೊಳ್ಳುವ ಪರಿಸ್ಥಿತಿಯನ್ನು ಸಹಿಸಿಕೊಳ್ಳಬೇಕಾಗಿ ಬರಬಹುದು. ೧೯೩೨ರ ಪಾಲುದಾರಿಕೆ ಕಾಯ್ದೆ, ೧೯೫೬ರ ಕಂಪನಿ ಕಾಯ್ದೆ ಹಾಗೂ ೧೯೬೧ರ ಕರ್ನಾಟಕ ಲೇವಾದೇವಿದಾರರ ಕಾಯ್ದೆಯಡಿ ಇವನ್ನು ರಚಿಸಬಹುದಾಗಿದ್ದು, ೧೯೭೦ರಲ್ಲಿ ಮೈಸೂರಿನಲ್ಲಿ ಸ್ಥಾಪನೆಗೊಂಡ ಕರ್ನಾಟಕ ಫೈನಾನ್ಸ್ ಕಾರ್ಪೊರೇಷನ್ ಅಂತಹ ಮೊದಲ ಕಾರ್ಪೊರೇಟ್ ಹಣಕಾಸು ಸಂಸ್ಥೆಯಾಗಿದೆ. ೧೯೮೭ರ ವೇಳೆಗೆ ಮೈಸೂರು ನಗರ ಒಂದರಲ್ಲೇ ಅಂತಹ ೧೦೦ ಹಣಕಾಸು ಸಂಸ್ಥೆಗಳಿದ್ದವು. ೨೦೦೯ರ ವೇಳೆಗೆ ತಾಲೂಕಿನಲ್ಲಿ ಇಂತಹ ಅನೇಕ ಹಣಕಾಸು ಸಂಸ್ಥೆಗಳು ನಗರ ಪ್ರದೇಶಗಳಲ್ಲಿ ವಿಶೇಷವಾಗಿ ಕಾರ್ಯನಿರ್ವಹಿಸುತ್ತಿದ್ದವು.

**ಕೃಷಿ ಉತ್ಪನ್ನ ನಿಯಂತ್ರಣ ಮಾರುಕಟ್ಟೆ :** ಕೃಷಿ ಉತ್ಪನ್ನಗಳ ವ್ಯಾಪಾರಕ್ಕೆ ನಿಯಂತ್ರಿತ ಮಾರುಕಟ್ಟೆಗಳನ್ನು ಸ್ಥಾಪಿಸುವ ಕ್ರಿಯೆ ೧೯೩೯ ಹಾಗೂ ೧೯೬೬ರ ಕಾಯ್ದೆಯಂತೆ ಜಾರಿಯಲ್ಲಿದ್ದು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ನಿಯಂತ್ರಣಕ್ಕೊಳಪಟ್ಟಿರುವ ಒಂದು ಮುಖ್ಯ ಮಾರುಕಟ್ಟೆ (ಮೈಸೂರು, ೧೯೫೦) ಹಾಗೂ ಒಂದು ಉಪ ಮಾರುಕಟ್ಟೆ (ಕಡಕೊಳ, ೧೯೭೧) ಗಳು ತಾಲೂಕಿನಲ್ಲಿವೆ. ಅಲ್ಲದೆ ಮಂಡಳಿಯ ವಿಭಾಗೀಯ ಕಚೇರಿ, ಅಧೀಕ್ಷಕ ಅಭಿಯಂತರರ ಕಚೇರಿ, ತರಬೇತಿ ಮಹಾವಿದ್ಯಾಲಯಗಳೂ ಇಲ್ಲಿವೆ. ಈರುಳ್ಳಿ, ಆಲೂಗಡ್ಡೆ, ಹೂವು, ಹಣ್ಣು ಹಾಗೂ ತರಕಾರಿಗಳಿಗೆ ಮೈಸೂರಿನ ಕೃಷಿ ಉತ್ಪನ್ನ ಮಾರುಕಟ್ಟೆಗಳು ಹೆಸರಾಗಿದ್ದು, ಎಣ್ಣೆ ಬೀಜ, ನೆಲಗಡಲೆ, ಹುಣಿಸೆಹಣ್ಣು ಹಾಗೂ ತರಕಾರಿಗಳು ಇಲ್ಲಿಂದ ಇತರೆಡೆಗೆ ರಫ್ತಾಗುವ ಪ್ರಮುಖ ಬೆಳೆಗಳಾಗಿವೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನ ಈ ಕೃಷಿ ನಿಯಂತ್ರಿತ ಮಾರುಕಟ್ಟೆಗಳಲ್ಲಿ ಒಟ್ಟು ೨೨೮.೧೫ ಕೋಟಿ ರೂ. ಮೌಲ್ಯದ ವಹಿವಾಟು ನಡೆದಿತ್ತು.

**ವಾರದ ಸಂತೆ :** ತಾಲೂಕಿನ ಗ್ರಾಮಾಂತರ ಪ್ರದೇಶದಲ್ಲಿ ವಾರದ ಸಂತೆ ಜರುಗುತ್ತದೆ. ಕಡಕೊಳದಲ್ಲಿ ಶನಿವಾರ ಸಂತೆಯಾಗುತ್ತದೆ. ಇಂದು ಸಾರಿಗೆ ಸಂಪರ್ಕ ಸುಧಾರಿಸಿ ಗ್ರಾಮೀಣ ರಸ್ತೆ ಸಾರಿಗೆ ಸುಲಲಿತವಾಗಿ ಸಾಗಿರುವುದರಿಂದ ಗ್ರಾಮಾಂತರ ಪ್ರದೇಶದ ಜನ, ಮೈಸೂರು ನಗರಕ್ಕೆ ಬಂದು ಖರೀದಿ ಮಾಡುವುದು ಸರ್ವೇಸಾಮಾನ್ಯವಾಗಿದೆ.

**ಸಾರ್ವಜನಿಕ ಪಡಿತರ ವ್ಯವಸ್ಥೆ :** ತಾಲೂಕಿನಲ್ಲಿ ಬಹು ಹಿಂದಿನಿಂದಲೂ (೧೯೭೪) ಪಡಿತರ ಚೀಟಿ ವ್ಯವಸ್ಥೆ ರೂಢಿಯಲ್ಲಿದೆ. ೧೯೮೭ರ ವೇಳೆಗೆ ಮೈಸೂರು ನಗರದಲ್ಲಿ ೧೯೪ ಪಡಿತರ ವಿತರಣಾ ಕೇಂದ್ರಗಳಿದ್ದು, ೧.೧೦ ಲಕ್ಷ ಪಡಿತರ ಚೀಟಿಗಳು ಮೈಸೂರು ನಗರದಲ್ಲಿ ಚಲಾವಣೆಯಲ್ಲಿದ್ದವು. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ಒಟ್ಟು ೩೯೧ ನ್ಯಾಯಬೆಲೆ ಅಂಗಡಿಗಳಿದ್ದು, ೩,೦೦,೭೪೪ (೧,೯೭,೨೬೭ ಬಿಪಿಎಲ್ + ೧,೦೩,೪೭೭ ಎಪಿಎಲ್) ಪಡಿತರ ಕಾರ್ಡುಗಳು ಚಾಲ್ತಿಯಲ್ಲಿದ್ದವು.

**ಉಗ್ರಾಣ ವ್ಯವಸ್ಥೆ :** ರೈತರು ಕೃಷಿ ಉತ್ಪನ್ನಗಳನ್ನು ಶೇಖರಿಸಿಡಲು ಅನುಸರಿಸುವ ಸಾಂಪ್ರದಾಯಿಕ ವಿಧಾನಗಳ ಜೊತೆಗೆ, ವೈಜ್ಞಾನಿಕ ವಿಧಾನದಿಂದ ಕೃಷಿ ಉತ್ಪನ್ನಗಳನ್ನು ಸಾರ್ವಜನಿಕ ಉಗ್ರಾಣಗಳಲ್ಲಿ ಸಂಗ್ರಹಿಸಿಡುವ ವ್ಯವಸ್ಥೆಯು ೧೯೬೨ರ ಕಾಯ್ದೆಯನ್ವಯ ರಾಜ್ಯದಲ್ಲಿ ಚಲಾವಣೆಗೆ ಬಂದಿತು. ತತ್ಪರಿಣಾಮವಾಗಿ ೧೯೮೭ರ ವೇಳೆಗೆ ಮೈಸೂರು ನಗರದಲ್ಲಿ ಕೇಂದ್ರೀಯ ಉಗ್ರಾಣ ಹಾಗೂ ರಾಜ್ಯ ಸರ್ಕಾರಿ ಉಗ್ರಾಣ ನಿಗಮದ ಉಗ್ರಾಣಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ಸಂಗ್ರಹಣಾ ಸಾಮರ್ಥ್ಯ ಕ್ರಮವಾಗಿ ೪೨೫ ಹಾಗೂ ೬,೯೦೦ ಟನ್ನುಗಳಾಗಿತ್ತು. ಅಲ್ಲದೆ ರಾಜ್ಯ ಉಗ್ರಾಣ ನಿಗಮದ ೪,೦೫೦ ಟನ್ ಸಾಮರ್ಥ್ಯ ಇನ್ನೊಂದು ಬಾಡಿಗೆ ಉಗ್ರಾಣವೂ ಮೈಸೂರಿನಲ್ಲಿತ್ತು.